# ಮುಗಿಲಲಿ ಮರಿಹಕ್ಕಿ



■ ಲಲಿತಾ ಕೆ. ಹೊಸಪ್ಯಾಟಿ

ಮುಗಿಲಿನ ಅಂಚನು ತಲುಪುವೆನೆಂದು
ಮೇಲಕೆ ಹಾರಿತು ಮರಿಹಕ್ಕಿ
ನೀಲಾಕಾಶದ ಹರುಹನು ಕಂಡು
ರೆಕ್ಕೆ ಬಡಿಯಿತು ಖುಷಿವುಕ್ಕಿ

ಕೊರಳನು ಕೊಂಕಿಸಿ ಕಣ್ಣನು ಅಗಲಿಸಿ
ಸುತ್ತಲು ನೋಡಿತು ಕೌತುಕದಿ
ತೇಲುವ ಮೋಡದಿ ಹಾಡುತ ಹಕ್ಕಿ
ಹಾರೇ ಹಾರಿತು ವಿಸ್ಮಯದಿ

ರೆಕ್ಕೆ ಬಡಿಯುತ ಮುಂದೆ ಮುಂದೆ
ಸಾಗಿತು ಹಕ್ಕಿ ಬಲು ದೂರ
ಬಡಿದು ಬಡಿದು ರೆಕ್ಕೆ ಸೋತರೂ
ನಿಲುಕದ ಎತ್ತರ ಆ ಸೂರ

ಸೂರ್ಯನ ತಾಪ ಬಿಸಿಲ ಝಳ
ಉರಿದವು ಕಣ್ಣು ಪಕಪಕನೆ
ಬಣ್ಣದ ಹಕ್ಕಿ ತಂಪನು ಬಯಸಿ
ನೆರಳನು ಹುಡುಕಿತು ಬಡಬಡನೆ

ಆಕಾಶದಿ ಹಾರುವ ಹಕ್ಕಿಯ ಕಂಡು
ಕರಗಲೇ ಇಲ್ಲ ಮೋಡಗಳು
ದಾಹ ಏರಿ ಬಿಸಿಲಿನ ಉರಿಗೆ
ಸುಡುತಲೆ ಇದ್ದವು ರೆಕ್ಕೆಗಳು

ದಿನವಿಡೀ ಹಾರಿತು ಹಸಿವು ಹೆಚ್ಚಿತು
ಹತ್ತಿರ ಒಂದು ಹಣ್ಣಿಲ್ಲ
ಬಿಸಿಲಿನ ತಾಪಕೆ ನೆರಳನು ಬಯಸಿತು
ಆಕಾಶದಿ ಒಂದೂ ಮರವಿಲ್ಲ

ಪ್ರಾಣವೆ ಬಾಯಿಗೆ ಬಂದಂತಾಗಿ
ಕಣ್ಣಿಗೆ ಕತ್ತಲು ಕವಿದಿತ್ತು
ಉರಿ ಉರಿ ತಾಳದೆ ಗಳ ಗಳ ಅತ್ತಿತು
ತಾಯಿ ಹಕ್ಕಿ ನೆನಪಾತು

ಹಸಿದ ಹಕ್ಕಿಗೆ ನೀಲಿ ಗಗನದಿ
ತಿನ್ನಲು ಕಾಳು ಸಿಗಲಿಲ್ಲ
ನೀರು ನೆಲೆಯು ದೊರೆಯದ ಮೇಲೆ
ಗಗನದ ಯಾನ ಬೇಕಿಲ್ಲ

ಮರದ ಗೂಡಲಿ ಅಮ್ಮ ಹಕ್ಕಿಯ
ಪ್ರೀತಿ ಉಣಿಸು ನೆನಪಾತು
ಪುಟಾಣಿ ರೆಕ್ಕೆ ಸೋತು ಹೋದರೂ
ಮನೆಕಡೆ ಗ್ಯಾನ ಶುರುವಾತು

ಆಕಾಶದ ನಿಲುವು ದೂರವೆ ಚೆಂದ
ನಿಲ್ಲಲು ಒಂದು ನೆಲೆಯಿಲ್ಲ
ಚಿಕ್ಕಹಕ್ಕಿ ಚಿನ್ನುಹಕ್ಕಿ ಮರಳಿ
ಗೂಡಿಗೆ ಇಳಿತಲ್ಲ

ಹೊಲದ ಹಸಿರಲಿ ಹಣ್ಣಿನಮರದಲಿ
ಬೆಳ್ಳಂಬೆಳಗೆ ಚಿಲಿಪಿಲಿಯು
ಕಾಯಿಹಣ್ಣು ಹಸಿತೆನೆ ಹಿಡಿದು
ತಾಯಿ ಹಕ್ಕಿ ಸ್ವಾಗತವು

ಎತ್ತರ ಎತ್ತರ ಹಾರಿದರೇನು
ಕೆಳಗಡೆ ಇಳಿದು ಬರಬೇಕು
ಸಣ್ಣ ಕಾಳನು ಹುಡುಕಿ ತಿನಲು
ಮಣ್ಣಲಿ ಕಣ್ಣು ನೆಡಬೇಕು

ತೊಟ್ಟಿಲ ತೂಗಿ ಜೋಗುಳ ಹಾಡಿ
ಉಣಿಸಿದ ತಾಯಿ ಸವಿಮಾತು
ಚಾಚಿದ ಅಮ್ಮನ ಮಡಿಲಲಿ ಮಲಗಿ
ಪಯಣದ ಆಯಾಸ ಮರೆತಿತ್ತು ■







**ಸಿಂಧು ಅಡಿಗ**
3ನೇ ತರಗತಿ, ಸಂದೀಪನ್
ಆಂಗ್ಲ ಮಾಧ್ಯಮ ಶಾಲೆ
ನಾಗೂರು

**ಕುಂಚ ಪ್ರಪಂಚ**



**ವಿಸ್ಮಯ ಹೆಚ್. ಎಂ.**
ಯುಕೆಜಿ, ಅಕ್ಕಮಹಾದೇವಿ ನರ್ಸರಿ ಶಾಲೆ,
ಅನುಭವ ಮಂಟಪ,
ದಾವಣಗೆರೆ